**ಒ.ಎಸ್.ನಂ. 4/2020**
**PW-3**

**(ಇಂದು ದಿನಾಂಕಃ 10-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. BS ವಕೀಲರಿಂದಃ**

ವಾದಿ ಮತ್ತು ಪ್ರತಿವಾದಿಯರ ಕುಟುಂಬದ ವ್ಯವಹಾರ ನನಗೆ ಗೊತ್ತು. ಶಿವರಾಯನ ಮನೆತನ ದೊಡ್ಡದಿತ್ತು, ಖರ್ಚು ಬಹಳ ಬರುತ್ತಿತ್ತು ಎಂದರೆ ಸರಿಯಲ್ಲ. 2008 ರಲ್ಲಿ ಶಿವರಾಯ ಮಾಣಿಕಪ್ಪ ಚಂದ್ರಂಪಳ್ಳಿ ರವರಿಗೆ ಹೊಲವನ್ನು ಮಾರಾಟ ಮಾಡಿರುತ್ತಾನೆ. ಹೆಣ್ಣು ಮಕ್ಕಳ ಮದುವೆ ಮಾಡಲು ಆ ಹೊಲವನ್ನು ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಶಿವರಾಯ ಯಾವ ಉದ್ದೇಶಕ್ಕೆ ಆ ಹೊಲ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಆ ಜಮೀನು ಪುನಃ ಶಿವರಾಯನ ಹೆಸರಿಗೆ ಯಾವ ವರ್ಷ ನೋಂದಣಿ ಆಯಿತು ಎಂದರೆ ನನಗೆ ಗೊತ್ತಿಲ್ಲ. ಶಿವರಾಯ ತನ್ನ ಜೀವನದಲ್ಲಿ ಏನೇನು ವ್ಯವಹಾರ ಮಾಡಿರುವ ವಿಷಯ ನನಗೆ ಗೊತ್ತಿಲ್ಲ. ನಾಗಮ್ಮ ಶಿವರಾಯನ ವಿರುದ್ದ ಜೀವನಾಂಶ ಪ್ರಕರಣ ದಾಖಲಿಸಿದ ವಿಷಯ ಗೊತ್ತು. ಆ ಪ್ರಕರಣದಲ್ಲಿ ನಾಗಮ್ಮಳಿಗೆ ಜೀವನಾಂಶ ಕೊಡದ ಕಾರಣ ಶಿವರಾಯ ಎಷ್ಟು ಸಾರಿ ಜೈಲಿಗೆ ಹೋದ ವಿಷಯ ನನಗೆ ಗೊತ್ತಿಲ್ಲ. ಶಿವರಾಯ ನಾಗಮ್ಮಳಿಗೆ ಜೀವನಾಂಶ ಹಣ ನೀಡಿದ ನಂತರ ಜೈಲಿನಿಂದ ಬಿಡುಗಡೆ ಹೊಂದಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಶಿವರಾಯನಿಗೆ ಯಾವುದೇ ಮೂಲ ಆದಾಯ ಇರದ ಕಾರಣ 8 ನೇ ಪ್ರತಿವಾದಿಗೆ ಜಮೀನನ್ನು ಮಾರಾಟ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನಾಗಮ್ಮಳಿಗೆ ಜೀವನ ಪರ್ಯಂತ ಜೀವನಾಂಶವನ್ನು ಶಿವರಾಯ ನೀಡಿದ ಕಾರಣ ಆತನು ಪುನಃ ಜೈಲಿಗೆ ಹೋಗುವುದು ತಪ್ಪಿತು ಎಂದರೆ ನನಗೆ ಗೊತ್ತಿಲ್ಲ. 2008 ರಿಂದ 8ನೇ ಪ್ರತಿವಾದಿ ತಾನು ಕ್ರಯ ಪಡೆದ ಜಮೀನನ್ನು ಉಳುಮೆ ಮಾಡುತ್ತಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಆತನ ಹೆಸರು ಕಂದಾಯ ದಾಖಲಾತಿಯಲ್ಲಿ ನಮೂದು ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಏನೂ ಗೊತ್ತಿಲ್ಲದಿದ್ದರೂ ಸಹ ವಾದಿಗೆ ಮತ್ತು ನಾಗಮ್ಮಳ ಮಕ್ಕಳಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.